# ಕರ್ನಾಟಕದಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖೆಗಳ ಸೇವಾಕೈಂಕರ್ಯ

**ಸ್ವಾಮಿ ಪ್ರಮಥಾಧಿಪಾನಂದ**

ರಾಮಕೃಷ್ಣ ಮಠ ಮತ್ತು ಮಿಷನ್ನಿನ ಕೇಂದ್ರಗಳು ಕರ್ನಾಟಕದಲ್ಲಿ ಸುಮಾರು ಒಂದು ಶತಮಾನದ ಅವಧಿಯಲ್ಲಿ ಬಹಳ ವ್ಯಾಪಕವಾದ ಸೇವಾಕಾರ್ಯಗಳಲ್ಲಿ ತೊಡಗಿವೆ. ಇವುಗಳನ್ನು ಪರಿಚಯಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.





## ಹಿನ್ನೆಲೆ

ಶ್ರೀರಾಮಕೃಷ್ಣರ ಪ್ರಧಾನ ಶಿಷ್ಯರಾದ ಸ್ವಾಮಿ ವಿವೇಕಾನಂದರು ಭಾರತಾದ್ಯಂತ ಪರಿವ್ರಾಜಕರಾಗಿ ಸಂಚರಿಸಿ ಶತಮಾನಗಳ ಕಾಲ ವಿದೇಶಿಯರ ದಬ್ಬಾಳಿಕೆಯಿಂದಾಗಿ ಭಾರತ ಮಾತೆಯ ಮಕ್ಕಳು ಆತ್ಮಸ್ಥೈರ್ಯ ಮತ್ತು ಆತ್ಮಶ್ರದ್ಧೆಯನ್ನು ಕಳೆದುಕೊಂಡಿದ್ದುದನ್ನು ಗಮನಿಸಿದರು. ನೂರಾರು ವರ್ಷಗಳ ಕಾಲ ವಿದೇಶೀ ಆಕ್ರಮಣ-ಲೂಟಿಗಳಿಂದ ಭಾರತವು ಬಡ ರಾಷ್ಟ್ರವಾಗಿತ್ತು. ನಮ್ಮ ದೇಶವನ್ನು ಅಭೂತಪೂರ್ವ ವೈಭವಕ್ಕೆ ಪುನರುಜ್ಜೀವಿತಗೊಳಿಸಲು ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸುವುದಾಗಿ ತಮ್ಮ ಗುರುಗಳಿಂದ ಪ್ರೇರಣೆ ಮತ್ತು ಶ್ರೀಮಾತೆಯವರಿಂದ ಆಶೀರ್ವಾದ ಪಡೆದರು. ಅಮೆರಿಕ, ಜಪಾನ್ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಪಯಣಿಸಿ ಪಾಶ್ಚಿಮಾತ್ಯ ಸಂಸ್ಕೃತಿ -ಜೀವನದ ಬಗ್ಗೆ ತಮ್ಮ ಸೂಕ್ಷ್ಮದೃಷ್ಟಿಯಿಂದ ಜ್ಞಾನವನ್ನು ಹಾಗೂ ಒಳನೋಟವನ್ನು ಪಡೆದುಕೊಂಡರು.

ಭಾರತೀಯರ ಜನಜೀವನದಲ್ಲಿ ಭೌತಿಕ ಸಮೃದ್ಧಿಯನ್ನು ಉಂಟುಮಾಡಲು ಸ್ವಾಮಿ ವಿವೇಕಾನಂದರು ಪಶ್ಚಿಮ ರಾಷ್ಟ್ರಗಳಲ್ಲಿ ಇರುವ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಭಾರತಕ್ಕೆ ತಂದು ಅದಕ್ಕೆ ಬದಲಾಗಿ ಭಾರತದ ಆಧ್ಯಾತ್ಮಿಕ ಜ್ಞಾನಭಂಡಾರವನ್ನು ಪಾಶ್ಚಾತ್ಯ ರಾಷ್ಟ್ರಗಳಿಗೆ ವಿನಿಮಯ ಮಾಡುವ ಯೋಜನೆಯನ್ನು ಹಾಕಿದರು. ಇದನ್ನು ಸಾಧಿಸಲು ತಮ್ಮ ಗುರುಗಳ ಹೆಸರಿನಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಎಂಬ ಅವಳಿ ಸಂಸ್ಥೆಗಳನ್ನು ಸ್ಥಾಪಿಸಿದರು.

## ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸೇವಾಕಾರ್ಯದ ವಿಸ್ತಾರ

ಭಗವದ್ಗೀತೆಯು, 'ಪ್ರತಿಯೊಬ್ಬರೂ ತಪ್ಪದೇ ಯಜ್ಞ, ದಾನ ಮತ್ತು ತಪಸ್ಸನ್ನು ಅನುಷ್ಠಾನದಲ್ಲಿಟ್ಟುಕೊಳ್ಳಬೇಕು' ಎಂದು ಸಾರುತ್ತದೆ. ಸ್ವಾಮೀಜಿಯವರು ಭಗವದ್ಗೀತೆಯಲ್ಲಿರುವ ಯಜ್ಞ ಮತ್ತು ದಾನದ ಪರಿಕಲ್ಪನೆಗೆ ಸರಿಸಮಾನವಾದ ತ್ಯಾಗ ಮತ್ತು ಸೇವೆಗಳನ್ನು ನೂತನ ರಾಷ್ಟ್ರೀಯ ಆದರ್ಶಗಳಾಗಿ ಪರಿಚಯಿಸಿದರು. ಅವರು ದಾನವನ್ನು ಮಾನವನ ವ್ಯಕ್ತಿತ್ವದ ನಾಲ್ಕು ಆಯಾಮಗಳಿಗೆ ಸರಿಯಾಗಿ ನಾಲ್ಕು ವಿಧಗಳಾಗಿ ವರ್ಗೀಕರಿಸಿದ್ದಾರೆ.

೧) ದೈಹಿಕ ಆಯಾಮಕ್ಕೆ ಅನುಗುಣವಾಗಿ **ಅನ್ನದಾನ**

೨) ಪ್ರಾಣದ ಆಯಾಮಕ್ಕೆ ಅನುಗುಣವಾಗಿ **ಪ್ರಾಣದಾನ** (ಆರೋಗ್ಯದಾನ)

೩) ಮಾನಸಿಕ ಮತ್ತು ಬೌದ್ಧಿಕ ಆಯಾಮಗಳಿಗೆ ಸರಿಹೊಂದುವ **ವಿದ್ಯಾದಾನ** ಮತ್ತು

೪) ಆಧ್ಯಾತ್ಮಿಕ ಆಯಾಮಕ್ಕೆ ಆಧ್ಯಾತ್ಮಿಕ **ಜ್ಞಾನದಾನ.**

ಸ್ವಾಮೀಜಿ ಹೇಳುತ್ತಾರೆ, ''ಆಧ್ಯಾತ್ಮಿಕತೆ ಮತ್ತು ಆಧ್ಯಾತ್ಮಿಕ ಜ್ಞಾನದಾನ ಅತ್ಯುನ್ನತವಾದದು. ತದನಂತರ, ಲೌಕಿಕ ಜ್ಞಾನ ವಿತರಣೆ. ಮುಂದಿನದು ಆರೋಗ್ಯ ದಾನ. ಅದಾದ ಮೇಲೆ ಬರುವುದು ಅನ್ನದಾನ.''

ಈ ವಿಚಾರಪ್ರಣಾಲಿಯ ನಿಟ್ಟಿನಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸೇವಾ ಚಟುವಟಿಕೆಗಳನ್ನು ಕೆಳಕಂಡಂತೆ ವಿಂಗಡಿಸಲಾಗಿದೆ:

೧) ಪರಿಹಾರ ಮತ್ತು ಪುನರ್ವಸತಿ, ೨) ಆರೋಗ್ಯ ಮತ್ತು ಸ್ವಾಸ್ಥ್ಯ, ೩) ಶಿಕ್ಷಣ, ಮತ್ತು ೪) ಅಧ್ಯಾತ್ಮ. ಇವು ಕ್ರಮವಾಗಿ ಮೇಲೆ ತಿಳಿಸಲಾದ ನಾಲ್ಕು ದಾನದ ವರ್ಗಗಳಿಗೆ ಅನುಗುಣವಾಗಿವೆ.

ಈ ರೀತಿಯ ಕಾರ್ಯಯೋಜನೆಯನ್ನು ಒಳಗೊಂಡ ರಾಮಕೃಷ್ಣ ಮಠ ಮತ್ತು ಮಿಷನ್ ಪ್ರಪಂಚದಾದ್ಯಂತ ತನ್ನ ಶಾಖೆಗಳನ್ನು ಹೊಂದಿದೆ. ಕರ್ನಾಟಕದಲ್ಲೂ ಸಹ ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ವಿವೇಕಾನಂದರು, ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಶಿವಾನಂದರು, ಸ್ವಾಮಿ ರಾಮಕೃಷ್ಣಾನಂದರು, ಸ್ವಾಮಿ ವಿಜ್ಞಾನಾನಂದರು, ಸ್ವಾಮಿ ಅಭೇದಾನಂದರು  ಇವರ ಶುಭಾಗಮನದಿಂದ ಸ್ಫೂರ್ತಿ ಪಡೆದುಕೊಂಡು ಅನೇಕ ಶಾಖೆಗಳು ಉದ್ಭವವಾಗಿವೆ. ಪ್ರಸ್ತುತ ಕರ್ನಾಟಕದಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ೧೦ ಶಾಖೆಗಳು ಸೇವೆಯಲ್ಲಿ ನಿರತವಾಗಿವೆ. ಅವು ಕೆಳಕಂಡಂತಿವೆ:

**೧) ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠ**

**೨) ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ**

**೩) ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮ.**

**೪) ಮಂಗಳೂರಿನ ಶ್ರೀರಾಮಕೃಷ್ಣ ಮಠ ಮತ್ತು ಮಿಷನ್**

**೫) ಹಲಸೂರು ರಾಮಕೃಷ್ಣ ಮಠ**

**೬) ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮ**

**೭) ದಾವಣಗೆರೆಯ ರಾಮಕೃಷ್ಣ ಮಿಷನ್**

**೮) ಶಿವನಹಳ್ಳಿಯ ರಾಮಕೃಷ್ಣ ಮಿಷನ್**

**೯) ತುರುವೇಕೆರೆಯ ಮಾದಿಹಳ್ಳಿಯಲ್ಲಿ ರಾಮಕೃಷ್ಣ ಮಠ**

**೧೦) ವೆಂಕಟಾಪುರದ ರಾಮಕೃಷ್ಣ ಮಠ**

ಈ ಲೇಖನದಲ್ಲಿ ಕರ್ನಾಟಕದ ಶಾಖೆಗಳು ಮೇಲೆ ತಿಳಿಸಿದ ನಾಲ್ಕುವಿಧ ಸೇವಾಕಾರ್ಯಗಳನ್ನು ನಿರ್ವಹಿಸುತ್ತಿರುವ ಬಗೆಯನ್ನು ದೊರೆತ ಮಾಹಿತಿಗನುಸಾರವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

## ಆಧ್ಯಾತ್ಮಿಕ ಸೇವೆ (ಜ್ಞಾನದಾನ)

ಸಾಮಾನ್ಯವಾಗಿ ಕಂಡುಬರುವುದೇನೆಂದರೆ, ಕರ್ನಾಟಕದ ರಾಮಕೃಷ್ಣ ಮಠದ ಶಾಖೆಗಳಲ್ಲಿ ವಿಶೇಷವಾದ ಶ್ರೀರಾಮಕೃಷ್ಣರ ವಿಶ್ವಭಾವೈಕ್ಯ ಮಂದಿರ ನಿರ್ಮಿಸಲಾಗಿರುತ್ತದೆ. ಇವುಗಳಲ್ಲಿ ಪ್ರತಿನಿತ್ಯ ಪೂಜೆ, ಆರತಿ, ಭಜನೆಗಳನ್ನು ಹಾಗೂ ಭಾರತೀಯ ಸನಾತನ ಧರ್ಮದ ಪರ್ವದಿನಗಳಾದ ಶ್ರೀರಾಮನವಮಿ, ಕೃಷ್ಣಾಷ್ಟಮಿ, ಗಣೇಶ ಚತುರ್ಥಿ, ದುರ್ಗಾಪೂಜೆ, ದೀಪಾವಳಿ ಮತ್ತು ದಿವ್ಯತ್ರಯರ ಜಯಂತಿಗಳಂದು ವಿಶೇಷ ಪೂಜೆ, ಭಜನೆ, ಪ್ರವಚನ ಕಾರ್ಯಕ್ರಮಗಳನ್ನು ಸುಮಾರು ಒಂದು ಶತಮಾನಕ್ಕೂ ಹೆಚ್ಚು ಸುದೀರ್ಘ ಕಾಲದಿಂದ ಹಮ್ಮಿಕೊಳ್ಳಲಾಗಿವೆ.

ಆಧ್ಯಾತ್ಮಿಕ ಜಿಜ್ಞಾಸುಗಳ ಕೋರಿಕೆಯ ಮೇರೆಗೆ ಸಂಘಗುರುಗಳಿಂದ ಮಂತ್ರದೀಕ್ಷೆಯನ್ನು ಕಾಲಕಾಲಕ್ಕೆ ಆಯೋಜಿಸಲಾಗುತ್ತದೆ.

ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಸುಸಜ್ಜಿತ ಸಭಾಭವನವನ್ನು ಸಾಮಾನ್ಯವಾಗಿ ಎಲ್ಲಾ ಶಾಖಾಕೇಂದ್ರಗಳಲ್ಲೂ ಕಾಣಬಹುದು. ಈ ಸಭಾಂಗಣದಲ್ಲಿ ಪ್ರಾಯಶಃ ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಸಾಪ್ತಾಹಿಕ ಪ್ರವಚನಗಳನ್ನು ಆಯೋಜಿಸಲಾಗುತ್ತದೆ. ಇವುಗಳಲ್ಲಿ ಆಧ್ಯಾತ್ಮಿಕ ಶಿಬಿರಗಳು, ವ್ಯಕ್ತಿತ್ವ ನಿರ್ಮಾಣ ಶಿಬಿರಗಳು ಹಾಗೂ ಇತರ ಧಾರ್ಮಿಕ, ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳನ್ನೂ ಆಗಾಗ್ಗೆ ನಡೆಸಲಾಗುತ್ತದೆ. ಇದಲ್ಲದೆ ಹಲವಾರು ಕಡೆ ಸತ್ಸಂಗಗಳನ್ನು ಮತ್ತು ವಾರ್ಷಿಕ ಭಕ್ತ ಸಮ್ಮೇಳನಗಳನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತದೆ.

ಪ್ರತಿಯೊಂದು ಶಾಖೆಯಲ್ಲೂ ತನ್ನದೇ ಆದ ಪುಸ್ತಕ ಮಳಿಗೆಯಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುಸ್ತಕಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಲಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಶಾಖೆಗಳಲ್ಲಿ ಗ್ರಂಥಾಲಯಗಳನ್ನು ನಿರ್ಮಿಸಲಾಗಿದ್ದು ಇಲ್ಲಿ ಅತ್ಯಮೂಲ್ಯವಾದ ಧಾರ್ಮಿಕ, ಆಧ್ಯಾತ್ಮಿಕ ಪುಸ್ತಕಗಳೊಡನೆ ಸಾಮಾನ್ಯ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಬಹುಭಾಷಾ ಸಾಹಿತ್ಯ ಗ್ರಂಥಗಳ ಭಂಡಾರವನ್ನು ಸಾರ್ವಜನಿಕರಿಗೋಸ್ಕರ ಒದಗಿಸಲಾಗಿದೆ.

ವಿಶೇಷವಾಗಿ ೧೯೭೪ರಿಂದ ಮೈಸೂರು ಆಶ್ರಮದ ವತಿಯಿಂದ ನಡೆಸಲಾಗುತ್ತಿರುವ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಆಧರಿಸಿದ ತರಬೇತಿ ಶಿಬಿರಗಳನ್ನು ಮತ್ತು ಶಾಲಾಶಿಕ್ಷಕರಿಗಾಗಿ ಕಾರ್ಯಾಗಾರಗಳನ್ನು ಸುಮಾರು ೫ ದಶಕಗಳಿಂದ ಸಮರ್ಪಕವಾಗಿ ನಡೆಸುತ್ತಾ ಬಂದಿದೆ. ಇದಲ್ಲದೆ ಕಾಲಕಾಲಕ್ಕೆ ವಿವಿಧ ವರ್ಗದ ಜನರಿಗಾಗಿ ಆಧ್ಯಾತ್ಮಿಕ ಶಿಬಿರಗಳು ನಡೆಯುತ್ತವೆ. ಸಮಾಜದ ಬೇರೆ ಬೇರೆ ಸ್ತರಗಳಿಗೆ ಸೇರಿದವರು ನಮ್ಮ ದೇಶದ ವಿವಿಧ ಭಾಗಗಳಿಂದ ಬಂದು ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಾರೆ.

ಸಾರ್ವಜನಿಕರಿಗೆ ಯೋಗಾಸನದ ಶಿಬಿರಗಳನ್ನು ಹಲಸೂರು, ಬೆಳಗಾವಿ, ಮಂಗಳೂರು, ಮತ್ತು ಪೊನ್ನಂಪೇಟೆಯ ಶಾಖೆಗಳು ನಡೆಸುತ್ತಾ ಬಂದಿವೆ.

ರವಿವಾರದಂದು ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳನ್ನು ಬಾಲಕರಲ್ಲಿ ಬೆಳೆಸಲು ಬಾಲಕಸಂಘವನ್ನೂ, ಯುವಕರಲ್ಲಿ ಬೆಳೆಸಲು ಯುವಕ ಸಂಘವೊಂದನ್ನು ಬೆಂಗಳೂರು, ಮೈಸೂರು, ಮಂಗಳೂರು, ಹಲಸೂರು, ಬೆಳಗಾವಿ ಮತ್ತು ದಾವಣಗೆರೆ ಆಶ್ರಮಗಳು ನಡೆಸುತ್ತಿವೆ. ಇಲ್ಲಿ ಕುಶಲಕಲೆ, ದಿವ್ಯತ್ರಯರ ಜೀವನ ಮತ್ತು ಸಂದೇಶಗಳ ಬೋಧನೆಯಾಗುತ್ತದೆ. ಭಜನೆ, ಭಗವದ್ಗೀತಾ, ಶ್ರೀಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ ಪಾರಾಯಣ ಇತ್ಯಾದಿ ಒಳ್ಳೆಯ ಸಂಸ್ಕಾರಗಳನ್ನು ಕಲಿಸಿಕೊಡಲಾಗುತ್ತದೆ.

ಪ್ರತಿ ವರ್ಷದ ಬೇಸಿಗೆಯಲ್ಲಿ ವಿದ್ಯಾರ್ಥಿಗಳಿಗಾಗಿ ಬೇಸಿಗೆ ಶಿಬಿರ ಮತ್ತು ಅನೇಕ ಸ್ಪರ್ಧೆಗಳನ್ನು ಬೆಂಗಳೂರು, ಹಲಸೂರು, ಪೊನ್ನಂಪೇಟೆ, ಮೈಸೂರು, ಮಂಗಳೂರು, ದಾವಣಗೆರೆ ಮತ್ತು ಬೆಳಗಾವಿ ಶಾಖಾಕೇಂದ್ರಗಳು ನಡೆಸಿಕೊಂಡು ಬರುತ್ತಿವೆ. ಈ ಶಿಬಿರದಲ್ಲಿ ಮಕ್ಕಳಿಗೆ ದಿವ್ಯತ್ರಯರ ಜೀವನ ಮತ್ತು ಸಂದೇಶ, ನೀತಿಕತೆಗಳು, ವ್ಯಕ್ತಿತ್ವ ವಿಕಸನದ ವಿಷಯಗಳು, ಕುಶಲಕಲೆ, ಚಿತ್ರಕಲೆ, ಭಾಷಣ ಸಂವಹನ ಕಲೆ ಇತ್ಯಾದಿಗಳನ್ನು ಕಲಿಸಿಕೊಡಲಾಗುತ್ತದೆ.



ಬೆಳಗಾವಿ ಆಶ್ರಮದಲ್ಲಿ ಎರಡು ತಿಂಗಳಿಗೊಮ್ಮೆ ಜಪಯಜ್ಞವನ್ನೂ, ಪ್ರತಿವರ್ಷವೂ ಆಧ್ಯಾತ್ಮಿಕ ಶಿಬಿರ, ಮತ್ತು ಭಕ್ತ ಸಮ್ಮೇಳನವನ್ನು ನಡೆಸಲಾಗುತ್ತಿರುವ ಸಂಗತಿ ಇಲ್ಲಿ ವಿಶೇಷ ಗಮನಾರ್ಹ.

ಪೊನ್ನಂಪೇಟೆಯಲ್ಲಿ ಪ್ರತಿ ತಿಂಗಳ ಹುಣ್ಣಿಮೆಯಂದು ಸ್ತ್ರೀ ಭಕ್ತರು ಮಠದ ದೇವಾಲಯದಲ್ಲಿ ವಿಶೇಷ ಕುಂಕುಮಾರ್ಚನೆಯನ್ನು ಮಾಡುತ್ತಾರೆ.

ಮಂಗಳೂರಿನ ರಾಮಕೃಷ್ಣ ಮಠದ ಕಾರ್ಯಚಟುವಟಿಕೆಗಳಲ್ಲಿ ತಮ್ಮ ಸೇವೆಯನ್ನು ನೀಡಲು ಆಶ್ರಮದ ಭಕ್ತಮಹಿಳೆಯರು ಶಾರದಾ ಮಹಿಳಾ ವೃಂದವನ್ನು ಪ್ರಾರಂಭಿಸಿದ್ದು ಸ್ವಾಧ್ಯಾಯ, ಸಾಧನೆ ಹಾಗೂ ಸಮಾಜಸೇವೆಗೆ ತಮ್ಮದೇ ಆದ ಒಂದು ವೇದಿಕೆ ದೊರೆತದ್ದು ವಿಶೇಷ, ಅನನ್ಯ ಹಾಗೂ ಇಲ್ಲಿ ಉಲ್ಲೇಖನೀಯ.

### ಆಧ್ಯಾತ್ಮಿಕ ಮತ್ತು ಧಾರ್ಮಿಕ ಪುಸ್ತಕ ಪ್ರಕಾಶನ

ಮೈಸೂರಿನ ಆಶ್ರಮದ ಪ್ರಕಾಶನ ವಿಭಾಗವನ್ನು ಕಟ್ಟಿ ಬೆಳೆಸಿದ ಸ್ವಾಮಿ ಸೋಮನಾಥಾನಂದರು ಕನ್ನಡ ಪುಸ್ತಕಗಳ ಲೇಖನ, ಪ್ರಕಾಶನ ಮತ್ತು ಮಾರಾಟದ ಕಾರ್ಯದಲ್ಲಿಯೇ ಸುಮಾರು ೫ ದಶಕಗಳ ಕಾಲ ತಮ್ಮನ್ನು ತೊಡಗಿಸಿಕೊಂಡು, ಕನ್ನಡ ಜನತೆಯ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಪ್ರಕಾಶನ ವಿಭಾಗದಿಂದ ಪ್ರಕಟವಾಗುತ್ತಿರುವ ೪೩೮ಕ್ಕೂ ಹೆಚ್ಚು ಧಾರ್ಮಿಕ ಮತ್ತು ಆಧ್ಯಾತ್ಮಿಕ ಶೀರ್ಷಿಕೆಗಳು ನಾಡಿನಾದ್ಯಂತ ಜನರ ಮೆಚ್ಚುಗೆಯನ್ನು ಪಡೆದಿವೆ.



ಶ್ರೀರಾಮಕೃಷ್ಣ ವಿದ್ಯಾಶಾಲೆ, ಮೈಸೂರು

ಜನವರಿ ೨೦೦೦ದಿಂದ ಮೈಸೂರು ಆಶ್ರಮದ ವತಿಯಿಂದ ಆರಂಭಗೊಂಡ ನೀವು ಇದೀಗ ಓದುತ್ತಿರುವ 'ವಿವೇಕಪ್ರಭ' ಮಾಸಪತ್ರಿಕೆಯು ಅದ್ಭುತ ಯಶಸ್ಸು ಪಡೆದಿದೆ. ಇದರ ೧೦ ಸಾವಿರಕ್ಕೂ ಹೆಚ್ಚಿನ ಪ್ರತಿಗಳು ಪ್ರತಿ ತಿಂಗಳು ನಮ್ಮ ರಾಜ್ಯ ಮತ್ತು ದೇಶವಲ್ಲದೇ ವಿದೇಶದಲ್ಲಿರುವ ಕನ್ನಡಿಗರಿಗೂ ವಿತರಿತವಾಗುತ್ತಿವೆ.

### ಶೈಕ್ಷಣಿಕ ಸೇವೆ (ವಿದ್ಯಾದಾನ)
### ಸ್ವಾಮಿ ವಿವೇಕಾನಂದರ ಶಿಕ್ಷಣದ ಆದರ್ಶ

ಭಾರತದ ಈ ಪುಣ್ಯಭೂಮಿಯ ಪುರಾತನ ದಾರ್ಶನಿಕರು ಜ್ಞಾನವನ್ನು ಅಪರಾ-ವಿದ್ಯೆ ಮತ್ತು ಪರಾ-ವಿದ್ಯೆ ಎಂದು ವರ್ಗೀಕರಿಸಿದ್ದಾರೆ. ಅಪರಾವಿದ್ಯೆಯು ವಸ್ತುನಿಷ್ಠ ಬ್ರಹ್ಮಾಂಡದ ಜ್ಞಾನವಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಾಧಾನ್ಯತೆ ಪಡೆದಿರುವ ಭೌತಿಕ ವಿಜ್ಞಾನಗಳು ಈ ವಸ್ತುನಿಷ್ಠ ವಾಸ್ತವತೆಯ ಬಗ್ಗೆ ಕೂಲಂಕಷವಾಗಿ ಸಂಶೋಧನೆ ನಡೆಸಿವೆ. ಪರಾವಿದ್ಯಾ ಎಂಬುದು ಇಂದ್ರಿಯಾತೀತವಾದ, ಮನಸ್ಸು-ಮಾತಿಗೆ ನಿಲುಕದ ಆತ್ಯಂತಿಕ ಸತ್ಯದ ಜ್ಞಾನ. ಭಾರತದಲ್ಲಿ ಹಿಮಾಲಯದಂತೆ ಬೆಳೆದು ನಿಂತಿರುವ ಪರಾವಿದ್ಯೆ ಎಂಬ ಆಧ್ಯಾತ್ಮಿಕ ವಿಜ್ಞಾನವು ಶಾಶ್ವತವಾದ ಸಚ್ಚಿದಾನಂದ-ಸ್ವರೂಪವಾದ ಚೈತನ್ಯಕ್ಕೆ ಸಂಬಂಧಿಸಿದೆ. ಸ್ವಾಮೀಜಿ ಶಿಕ್ಷಣದ ಮೂಲಕ, ಪೂರ್ವದ ಆಧ್ಯಾತ್ಮಿಕತೆಯನ್ನು ಪಶ್ಚಿಮದ ವೈಜ್ಞಾನಿಕ ದೃಷ್ಟಿಕೋನದೊಂದಿಗೆ ಸಮಂಜಸವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡ



ಪುರುಷರು ಮತ್ತು ಮಹಿಳೆಯರನ್ನು ಸಮಾಜಕ್ಕೆ ನೀಡಲು ಬಯಸಿದ್ದರು. ರಾಮಕೃಷ್ಣ ಮಿಷನ್ ಮೂಲಕ ಒಂದು ಕಡೆ ವಿಜ್ಞಾನ ಮತ್ತು ತಂತ್ರಜ್ಞಾನ, ವೃತ್ತಿ ಕೌಶಲ್ಯ, ಕಲೆ, ಇಂಗ್ಲಿಷ್ ಇತ್ಯಾದಿ ವಿಷಯಗಳನ್ನು, ಮತ್ತೊಂದೆಡೆ ಉಪನಿಷತ್ತುಗಳು, ಸಂಸ್ಕೃತ ಮತ್ತು ವೈದಿಕ ಸಾಹಿತ್ಯ ಕಲಿಸುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವರು ಬಯಸಿದ್ದರು. ಈ ಶೈಕ್ಷಣಿಕ ಯೋಜನೆಯು ೧) ಏಕಾಗ್ರತೆಯ ಶಕ್ತಿಯಿಂದ ಯಥಾವತ್ತಾಗಿ ಗ್ರಹಿಸುವ ಬುದ್ಧಿ, ೨) ಕೆಲಸ ಮಾಡಲು ಕೈಗಳು ಮತ್ತು ೩) ಇತರರಿಗಾಗಿ ಭಾವಿಸುವ ಹೃದಯ – ಇವುಗಳ ಸಾಮರಸ್ಯದಿಂದ ಕೂಡಿದ ಸರ್ವತೋಮುಖ ಬೆಳವಣಿಗೆಯ ಮೂಲಕ ಒಬ್ಬ ವ್ಯಕ್ತಿಯನ್ನು ಪರಿಪೂರ್ಣತೆಯೆಡೆಗೆ ಕರೆದೊಯ್ಯುವ ಗುರಿಯನ್ನು ಹೊಂದಿದೆ. ಪರಾ ಮತ್ತು ಅಪರಾವಿದ್ಯೆಯ ಏಕೀಕರಣವು ರಾಮಕೃಷ್ಣ ಮಿಷನ್ ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಗಳ ಅವಿಭಾಜ್ಯ ವಿಧಾನವಾಗಿದೆ.

ಸ್ವಾಮೀಜಿ ಕೊಟ್ಟ ಈ ಆದರ್ಶದಿಂದ ಸ್ಫೂರ್ತಿ ಪಡೆದು ಶಾಂಭವಾನಂದಜಿ **ಮೈಸೂರಿನಲ್ಲಿ** ೧೯೫೩ರಲ್ಲಿ ೬೭ ಎಕರೆಯಷ್ಟು ವಿಸ್ತಾರವಾದ ಜಾಗದಲ್ಲಿರುವ **ಶ್ರೀರಾಮಕೃಷ್ಣ ವಿದ್ಯಾಶಾಲಾ** ಎಂಬ ವಸತಿ ಶಾಲೆಯನ್ನು ಆರಂಭಿಸಿದರು. ವಿದ್ಯಾರ್ಥಿಗಳ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಈಜುಕೊಳ, ಗ್ರಂಥಾಲಯ, ಜಿಮ್ನೆಶಿಯಮ್, ೨೪ ಆಟದ ಮೈದಾನಗಳು, ಅಟಲ್ ಟಿಂಕರಿಂಗ್ ಪ್ರಯೋಗಾಲಯ, ಜ್ಞಾನೋದ್ಯಾನ, ಟೆಲಿಸ್ಕೋಪ್ ಮುಂತಾದ ವ್ಯವಸ್ಥೆಗಳಿರುವ ಈ ಶಾಲೆ ಇಂದು ನಾಡಿನಾದ್ಯಂತ ಉತ್ತಮ ಶಿಕ್ಷಣ ಪ್ರದಾನಕ್ಕೆ ಪ್ರಸಿದ್ಧವಾಗಿರುವ ಶಾಲೆಯಾಗಿ ಅಭಿವೃದ್ಧಿ ಹೊಂದಿದೆ. ಸುಮಾರು ೭೨ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಶಾಲೆಗೆ ರಾಜ್ಯದ ಹಾಗು ರಾಷ್ಟ್ರದ ಹಲವಾರು ಸ್ಥಳಗಳಿಂದ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಬರುತ್ತಿದ್ದಾರೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗದಿಂದ ಬರುವ ವಿದ್ಯಾರ್ಥಿಗಳಿಗಾಗಿ ಶೇಕಡಾ ೨೦ರಷ್ಟು ದಾಖಲಾತಿ ಮೀಸಲಿಡಲಾಗಿದೆ. ಇಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಭಾರತ ದಲ್ಲಷ್ಟೇ ಅಲ್ಲದೇ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ನೆಲೆಸಿ ದೊಡ್ಡ ಜವಾಬ್ದಾರಿಗಳನ್ನು ಹೊತ್ತು ಕಾರ್ಯ ನಿರ್ವಹಿಸುತ್ತಿದ್ದಾರೆ.

ಮೈಸೂರು ಆಶ್ರಮದ ವತಿಯಿಂದ 'ವಿವೇಕಶಿಕ್ಷಣ' ಎಂಬ ಯೋಜನೆಯಡಿ ಸರ್ಕಾರಿ ಶಾಲೆಯ ೯ನೆಯ ಮತ್ತು ೧೦ನೆಯ ತರಗತಿಯ ೨೫೦ ಮಕ್ಕಳಿಗೂ ಹಾಗೂ 'ಗದಾಧರ ಅಭ್ಯುದಯ ಪ್ರಕಲ್ಪ'ದಡಿ ೫ ರಿಂದ ೮ನೆಯ ತರಗತಿಯ ೧೦೦ ಮಕ್ಕಳಿಗೆ ಉಚಿತ ಶೈಕ್ಷಣಿಕ ನೆರವು, ಸಮವಸ್ತ್ರ, ಪೌಷ್ಟಿಕ ಆಹಾರ ಮತ್ತು ಲೇಖನ ಸಾಮಗ್ರಿಗಳನ್ನು ಸುಮಾರು ೧೦ ವರ್ಷಗಳಿಂದ ನೀಡಲಾಗುತ್ತಿದೆ. ೨೦೧೬ರ ನವೆಂಬರ್‌ನಲ್ಲಿ ಚಾಮರಾಜ ನಗರದ ತೆಂಕಲಮೋಳೆ ಗ್ರಾಮದಲ್ಲಿ ಶ್ರೀರಾಮಕೃಷ್ಣ ಸೇವಾಮಂದಿರವನ್ನು ಆರಂಭಿಸಲಾಗಿದ್ದು, ಅಲ್ಲಿನ ಮಕ್ಕಳಿಗೆ ಉಚಿತ ಶೈಕ್ಷಣಿಕ ತರಬೇತಿಯ ಜೊತೆಗೆ ಪಠ್ಯೇತರ ಕೌಶಲ್ಯಗಳನ್ನು ಕಲಿಸಲಾಗುತ್ತಿದೆ.

ಬೇರೆಡೆಯಿಂದ ಬೆಂಗಳೂರಿಗೆ ಅಧ್ಯಯನ ಮಾಡಲು ಬರುವ ಕಾಲೇಜು ಹುಡುಗರಿಗೆ **ಬೆಂಗಳೂರು ಮಠದ ಅಂಗವಾಗಿ 'ಶ್ರೀರಾಮಕೃಷ್ಣ ವಿದ್ಯಾರ್ಥಿಮಂದಿರ'** ಎಂಬ ಶಿಸ್ತುಬದ್ಧವಾದ ವಿದ್ಯಾರ್ಥಿನಿಲಯವು ೧೯೪೩ರಲ್ಲಿ ಆರಂಭವಾಯಿತು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಊಟ-ವಸತಿ ಒದಗಿಸುವ ವಿದ್ಯಾರ್ಥಿನಿಲಯವು ಪ್ರಸ್ತುತ ವಿಶಾಲವಾದ ಪ್ರಾರ್ಥನಾಮಂದಿರ, ಒಳಾಂಗಣ ಕ್ರೀಡೆ ಮತ್ತು ಸಭಾಂಗಣ, ಸುಸಜ್ಜಿತ ಗ್ರಂಥಾಲಯ ಮತ್ತು ಮೂವತ್ತೈದು ವಾಸದ ಕೊಠಡಿಗಳನ್ನು ಒಳಗೊಂಡಿರುವ ಉತ್ತಮ ಪ್ರಮಾಣದ ಎರಡು ಅಂತಸ್ತಿನ ಕಟ್ಟಡ ಹೊಂದಿದೆ. ಆಟದ ಮೈದಾನಗಳು ಕೂಡ ಇವೆ. ವಿದ್ಯಾರ್ಥಿ ಮಂದಿರವು ಸುಮಾರು ತೊಂಬತ್ತೈದು ವಿದ್ಯಾರ್ಥಿಗಳಿಗೆ ಅಗತ್ಯ ಪೀಠೋಪಕರಣಗಳನ್ನು ಒದಗಿಸಿ ಅಧ್ಯಯನಕ್ಕೆ ಅವಕಾಶ ಕಲ್ಪಿಸುತ್ತದೆ.

ರಾಮಕೃಷ್ಣ ಮಠದ ಸಂನ್ಯಾಸಿಗಳ ಒಡನಾಟ ಮತ್ತು ಮಾರ್ಗದರ್ಶನ ವಿದ್ಯಾರ್ಥಿಗಳ ವ್ಯಕ್ತಿತ್ವ-ನಿರ್ಮಾಣಕ್ಕೆ ಅನುವು ಮಾಡಿಕೊಡುತ್ತದೆ. ಸಂಸ್ಥೆಯು ಆಟಗಳು ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ದೈಹಿಕ ಸಾಮರ್ಥ್ಯದ ಬೆಳವಣಿಗೆಗೆ ವಿಶೇಷ ಒತ್ತು ನೀಡುತ್ತದೆ. ಇಲ್ಲಿ ವೈಯಕ್ತಿಕ ಪ್ರತಿಭೆಯನ್ನು ಬೆಳೆಸಲು ಪ್ರೋತ್ಸಾಹಿಸಲಾಗುತ್ತದೆ ಮತ್ತು ಬಡ ಆದರೆ ಅರ್ಹ ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲವನ್ನು ಸಹ ವಿಸ್ತರಿಸಲಾಗುತ್ತದೆ.

**ಮಂಗಳೂರಿನ** ಸಾಹುಕಾರ್ ಶ್ರೀ ವೆಂಕಟೇಶ್ ಪೈ ಅವರು ಸ್ವಾಮೀಜಿಯವರ ಜೀವನಾದರ್ಶದಿಂದ ಪ್ರಭಾವಿತರಾಗಿ ೧೯೪೦ ರಲ್ಲಿ ಸೇವೆಯ ಆದರ್ಶವನ್ನು ಮುಂದಿಟ್ಟುಕೊಂಡು ಬಡಮಕ್ಕಳ ಕಲ್ಯಾಣಕ್ಕಾಗಿ ಒಂದು **ಬಾಲಕಾಶ್ರಮ**ವನ್ನು ಹುಟ್ಟುಹಾಕಿದ್ದರು. ಇಲ್ಲಿ ಮಕ್ಕಳಿಗೆ ಉಚಿತವಾಗಿ ಊಟ-ವಸತಿಗಳನ್ನು ನೀಡಲಾಗುತ್ತಿತ್ತು. ೧೯೫೧ ರಲ್ಲಿ ಬಾಲಕಾಶ್ರಮದ ಜೊತೆಗೆ ಏಳು ಎಕರೆಗಳಷ್ಟು ಜಮೀನು ಹಾಗೂ ಅದರಲ್ಲಿರುವ ಸುಂದರ ನಿವೇಶನವನ್ನು ರಾಮಕೃಷ್ಣ ಮಿಷನ್ನಿಗೆ ಹಸ್ತಾಂತರಿಸಿದರು. ಹೆಚ್ಚತೊಡಗಿದ ಬಾಲಕಾಶ್ರಮದ ಮಕ್ಕಳ ಸಂಖ್ಯೆಗೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲು ೧೯೬೩ ರಲ್ಲಿ ವಿದ್ಯಾರ್ಥಿಗಳ ವಸತಿ, ಅಧ್ಯಯನ ಇತ್ಯಾದಿಗಳಿಗಾಗಿ ವ್ಯವಸ್ಥೆಯನ್ನೊಳಗೊಂಡ ಒಂದು ಕಟ್ಟಡದ ನಿರ್ಮಾಣವಾಯಿತು. ಬಾಲಕಾಶ್ರಮದಲ್ಲಿ ಜಾತಿ-ಮತ ಭೇದವಿಲ್ಲದೆ ಎಲ್ಲ ಮಕ್ಕಳಿಗೆ ಯೋಗ್ಯ ವಿದ್ಯಾಭ್ಯಾಸ, ಸ್ವಾವಲಂಬನೆ, ಸಹಕಾರ ಮನೋಭಾವವನ್ನು ಬೆಳೆಸುವುದರ ಜೊತೆಗೆ ಶಿಸ್ತುಬದ್ಧ ಜೀವನ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಅವರಲ್ಲಿ ತುಂಬಲು ವಿಶೇಷ ಕಾಳಜಿ ವಹಿಸಲಾಗುತ್ತದೆ.

ಸ್ವಾಮಿ ವಿವೇಕಾನಂದ ತರಬೇತಿ ಕೇಂದ್ರದ ಮೂಲಕ ಕಲಿಕೆಯಲ್ಲಿ ಹಿಂದುಳಿದಿರುವ ಮತ್ತು ಸರಿಯಾದ ಆರ್ಥಿಕ ಹಿನ್ನೆಲೆ ಇಲ್ಲದ ಮಕ್ಕಳಿಗೆ ಶೈಕ್ಷಣಿಕ ತರಬೇತಿಯ ಜೊತೆಗೆ ಪೌಷ್ಟಿಕವಾದ ಆಹಾರ, ಹಾಲು, ಪಠ್ಯ ಸಲಕರಣೆ ಎಲ್ಲವನ್ನೂ ಉಚಿತವಾಗಿ ನೀಡುತ್ತಾ ಬಂದಿದೆ. ಅಷ್ಟೇ ಅಲ್ಲದೆ ಅರ್ಹ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಪುಸ್ತಕ, ಲೇಖನ, ಸಮವಸ್ತ್ರ ಮತ್ತಿತರ ಆವಶ್ಯಕ ಸಾಮಗ್ರಿಗಳ ವಿತರಣೆ ಮಾಡುತ್ತಾ ಬಂದಿದೆ.

**ಬೆಳಗಾವಿಯ ರಾಮಕೃಷ್ಣ ಮಿಷನ್** ಆಶ್ರಮವು ಸಮಾಜಮುಖಿಯಾಗಿ ಹಲವಾರು ಶೈಕ್ಷಣಿಕ ಸೇವಾ ಚಟುವಟಿಕೆಗಳನ್ನು ಹಮ್ಮಿಕೊಂಡು ಬಂದಿದೆ. ಅದರಲ್ಲಿ ಮುಖ್ಯವಾಗಿ ಯುವಪೀಳಿಗೆಗಾಗಿ ವ್ಯಕ್ತಿತ್ವ ನಿರ್ಮಾಣಕಾರಿ ತರಬೇತಿ, ವಿವೇಕಾನಂದ ಕಂಪ್ಯೂಟರ್ ಕೋಚಿಂಗ್, ತರಗತಿಗಳನ್ನು ನಡೆಸಲಾಗುತ್ತಿದೆ. ಪ್ರತಿ ವರ್ಷವೂ ಬಡ ಪ್ರತಿಭಾನ್ವಿತ ಮಕ್ಕಳಿಗೆ ಸಹಾಯಧನವಾಗಿ ಸುಮಾರು ರೂ. ೧೪–೧೫ ಲಕ್ಷಗಳವರೆಗೆ ನೀಡಲಾಗುತ್ತಿದೆ. ಯುವ ಸಮಾವೇಶ ಮತ್ತು ಶಿಕ್ಷಕರ ಸಮಾವೇಶವನ್ನು ಪ್ರತಿ ವರ್ಷವೂ ನಡೆಸಲಾಗುತ್ತಿದೆ. ಸ್ವಾಮಿ ವಿವೇಕಾನಂದ ಸ್ಮಾರಕದಲ್ಲಿ ಸಂಸ್ಕೃತ ಹಾಗೂ ಹಿಂದೀ ತರಗತಿಗಳು, ಯೋಗಾಸನ ತರಗತಿಗಳು, ಉಪನ್ಯಾಸವೇ ಮೊದಲಾದ ಹಲವಾರು ಸೇವಾಕಾರ್ಯಗಳನ್ನು ನಡೆಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕಿನ ಮೊದಲ CBSE ಸಂಯೋಜಿತ ಶಾಲೆಯಾದ **ಬದರಿಕಾಶ್ರಮ ವಿದ್ಯಾಶಾಲೆ**ಯು ೨೦೦೮ರಲ್ಲಿ **ಮಾದಿಹಳ್ಳಿ**ಯಲ್ಲಿ ಸ್ಥಾಪಿತವಾಯಿತು. ಗ್ರಾಮೀಣ ಸಮುದಾಯಕ್ಕೆ ಗುಣಮಟ್ಟದ, ಮೌಲ್ಯಾಧಾರಿತ ಹಾಗೂ ಆಧುನಿಕ ಶಿಕ್ಷಣ ನೀಡಬೇಕೆಂ


ಶ್ರೀರಾಮಕೃಷ್ಣ ವಿದ್ಯಾಕೇಂದ್ರ, ಶಿವನಹಳ್ಳಿ

ಬುದು ಸಂಸ್ಥಾಪಕರಾದ ಸ್ವಾಮಿ ಓಂಕಾರಾನಂದರ ಆಶಯವಾಗಿತ್ತು. ವಿದ್ಯಾಶಾಲೆಯಲ್ಲಿ ವೈಫೈ ನೆಟ್‌ವರ್ಕ್‌ನೊಂದಿಗೆ ಸಂಪರ್ಕಗೊಂಡಿರುವ ೫೦ ಆಪಲ್ ಐ-ಪ್ಯಾಡ್ ಉಳ್ಳ ಲ್ಯಾಬ್ ಉಂಟು. ೧೦ನೇ ತರಗತಿಯ ವಿದ್ಯಾರ್ಥಿಗಳ ಮೊದಲ ಬ್ಯಾಚ್ ಮಾರ್ಚ್ ೨೦೧೯ರಲ್ಲಿ ರಾಜ್ಯ ಬೋರ್ಡ್ ಪರೀಕ್ಷೆಗೆ ಹಾಜರಾಗಿ ೧೦೦% ಫಲಿತಾಂಶವನ್ನು ಪಡೆದುಕೊಂಡಿದೆ. ಶಾಲೆಯಲ್ಲಿ ಪ್ರಸ್ತುತ ಎಲ್‌ಕೆಜಿಯಿಂದ ೧೦ನೇ ತರಗತಿವರೆಗೆ ೩೦ ಶಿಕ್ಷಕರು ಮತ್ತು ೭೦೦ ಮಂದಿ ವಿದ್ಯಾರ್ಥಿಗಳು ಇದ್ದಾರೆ. ಸಾರಿಗೆ ಅನುಕೂಲವಾಗುವಂತೆ ಶಾಲೆಯು ಶಾಲಾ ಬಸ್‌ಗಳನ್ನು ತುರುವೇಕೆರೆ ತಾಲೂಕಿನ ೧೧೫ ಹಳ್ಳಿಗಳಿಗೆ ಒದಗಿಸುತ್ತಿದೆ.

**ಶಿವನಹಳ್ಳಿಯ ರಾಮಕೃಷ್ಣ ಮಿಷನ್ನಿನ** ಪ್ರಮುಖ ಚಟುವಟಿಕೆಗಳಲ್ಲಿ ಒಂದಾದ ಶ್ರೀರಾಮಕೃಷ್ಣ ವಿದ್ಯಾಕೇಂದ್ರವನ್ನು ನರ್ಸರಿಯಿಂದ ೭ನೇ ತರಗತಿಯವರೆಗೆ ಕುಗ್ರಾಮಗಳಲ್ಲಿರುವ ಮಕ್ಕಳಿಗೋಸ್ಕರ ನಡೆಸಲಾಗುತ್ತಿದೆ. ಶಾಲೆಯ ಪ್ರಸ್ತುತ ಸಾಮರ್ಥ್ಯ ಸುಮಾರು ೨೨೫ ವಿದ್ಯಾರ್ಥಿಗಳಾಗಿದ್ದು ಎಲ್ಲಾ ಮಕ್ಕಳಿಗೆ ಉಪಹಾರ, ಮಧ್ಯಾಹ್ನದ ಊಟ, ಸಮವಸ್ತ್ರ ಮತ್ತು ಶೈಕ್ಷಣಿಕ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತದೆ. ಬೋಧನಾ ಮಾಧ್ಯಮ ಕನ್ನಡವಾಗಿದ್ದು, ಇಂಗ್ಲಿಷ್ ಎರಡನೇ ಅಧ್ಯಯನದ ಭಾಷೆಯಾಗಿದೆ. ಪ್ರಾಥಮಿಕ ಸಂವಾದಾತ್ಮಕ ವರ್ಕ್‌ಬುಕ್‌ಗಳಂತಹ ವಿವಿಧ ನವೀನ ತಂತ್ರಗಳನ್ನು ಶಾಲೆಯು ಅಳವಡಿಸಿಕೊಂಡಿದೆ. ಮಕ್ಕಳಲ್ಲಿ ಅನೇಕರು ಪ್ರತಿದಿನ ನಾಲ್ಕು ಕಿಲೋ ಮೀಟರ್‌ಗಿಂತ ಹೆಚ್ಚು ನಡೆದುಕೊಂಡು ಶಾಲೆಗೆ ಹಾಜರಾಗುತ್ತಾರೆ.


ಆರೋಗ್ಯಧಾಮ, ಪೊನ್ನಂಪೇಟೆ

ವಿದ್ಯಾಕೇಂದ್ರವು ಆಧುನಿಕ ವಿಜ್ಞಾನದ ಸಹಾಯದಿಂದ ಮಕ್ಕಳಲ್ಲಿ ಜ್ಞಾನವನ್ನು ಬೆಳಗಿಸುವ ಮತ್ತು ಅವರ ಸೃಜನಶೀಲ ಸಾಮರ್ಥ್ಯವನ್ನು ಹೊರತರುವ ಗುರಿಯನ್ನು ಹೊಂದಿದೆ. ಕಲಿಕೆಯನ್ನು ಸಂತೋಷದಾಯಕ ಪ್ರಕ್ರಿಯೆಯನ್ನಾಗಿ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ. ಪ್ರಯೋಗಾಲಯದಲ್ಲಿನ ಅನುಭವ, ಸಸ್ಯ-ಮರಗಳು, ವನ್ಯಜೀವಿಗಳನ್ನು ಆವರಿಸುವ ಪ್ರಕೃತಿಯ ಅಧ್ಯಯನ, ಸಂವಾದಾತ್ಮಕ ಪ್ರಾಜೆಕ್ಟ್ ಕೆಲಸ ಮತ್ತು ಕಂಪ್ಯೂಟರ್ ತರಗತಿಗಳ ಸಹಾಯದಿಂದ ಮಕ್ಕಳಲ್ಲಿ ಜ್ಞಾನದ ದಾಹವನ್ನು ಉಂಟುಮಾಡಿ, ವೈಚಾರಿಕತೆಯನ್ನು ಬೆಳಸಿ, ವೈಜ್ಞಾನಿಕ ಮನೋಧರ್ಮವನ್ನು ಹುರಿದುಂಬಿಸುತ್ತದೆ. ಈ ಶಾಲೆಯು ನೀಡುತ್ತಿರುವ ಗುಣಮಟ್ಟದ ಶಿಕ್ಷಣಕ್ಕಾಗಿ NABET ನಿಂದ ಮಾನ್ಯತೆ ಪಡೆದ ಮೊದಲ ಭಾರತೀಯ ಗ್ರಾಮೀಣ ಶಾಲೆ ಎಂಬ ಹೆಗ್ಗಳಿಕೆಯನ್ನು ಹೊಂದಿದೆ.

ಶ್ರೀ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಅಳವಡಿಸಿಕೊಂಡಿರುವ ಶೈಕ್ಷಣಿಕ ವಿಧಾನಗಳ ಕೆಲವು ಪ್ರಮುಖಾಂಶಗಳು:

- ಪರಿಕಲ್ಪನೆಗಳನ್ನು ಕಲಿಸಲು ವಿಶಿಷ್ಟವಾದ ನೈಸರ್ಗಿಕ ಅರಣ್ಯ ಪರಿಸರವನ್ನು ಬಳಸಿಕೊಳ್ಳಲಾಗುತ್ತದೆ.
- ಮೌಲ್ಯಗಳನ್ನು ಸಂಯೋಜಿಸುವ ಮೂಲಕ ನೈತಿಕ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದು.
- ಭಾರತೀಯ ಸಂಪ್ರದಾಯಗಳು, ಇತಿಹಾಸ, ಸಂತರು ಮತ್ತು ರಾಷ್ಟ್ರೀಯ ನಾಯಕರ ಜೀವನ ಇವೇ ಮೊದಲಾದುವನ್ನು ಅವರಿಗೆ ಪರಿಚಯಗೊಳಿಸುವ ಮೂಲಕ ಸಾಂಸ್ಕೃತಿಕ ಮತ್ತು ದೇಶಭಕ್ತಿಯ ಮೌಲ್ಯಗಳನ್ನು ಬೆಳಗಲಾಗುತ್ತಿದೆ.
- ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಶೈಕ್ಷಣಿಕ ಅಂಕಗಳ ಜೊತೆಗೆ ಅವರ ಪ್ರತಿಭೆ, ನವೀನತೆ, ನಡವಳಿಕೆ ಮತ್ತು ಪರಿಕಲ್ಪನಾ ಕಲಿಕೆಯ ಕೌಶಲ್ಯಗಳ ಮೂಲಕ ಅಳೆಯಲಾಗುತ್ತದೆ.

### ವೈದ್ಯಕೀಯ ಸೇವೆ (ಪ್ರಾಣದಾನ)

**ಪೊನ್ನಂಪೇಟೆ**ಯಲ್ಲಿ ಶ್ರೀ ರಾಮಕೃಷ್ಣ ಶಾರದಾಶ್ರಮದ ವತಿಯಿಂದ ೧೯೪೨ರಲ್ಲಿ ಹೋಮಿಯೋಪತಿ ಚಿಕಿತ್ಸಾ ಕೇಂದ್ರ ಆರಂಭವಾಯಿತು. ೧೯೪೭ರಲ್ಲಿ ಅಲೋಪತಿ ಚಿಕಿತ್ಸಾಲಯವನ್ನು ಪ್ರಾರಂಭಿಸಲಾಯಿತು. ಕ್ರಮೇಣ ಬೆಳೆದ ಈ ಚಿಕಿತ್ಸಾ ಕೇಂದ್ರವೇ ಈಗ ಜಿಲ್ಲೆಯ ಉತ್ತಮ ಸೌಲಭ್ಯ ಸಲಕರಣೆಗಳುಳ್ಳ ಸುಸಜ್ಜಿತ ಆಸ್ಪತ್ರೆಯಾಗಿ ನಿಂತಿದೆ. ೨೦೦೪ರಲ್ಲಿ, ಆಶ್ರಮವು 'ವಿವೇಕಾನಂದ ಆರೋಗ್ಯ ಧಾಮ' ಎಂಬ ಪ್ರಕೃತಿಚಿಕಿತ್ಸಾ ಸ್ವಾಸ್ಥ್ಯ ಕೇಂದ್ರವನ್ನು ಸ್ಥಾಪಿಸುವ ಮೂಲಕ ತನ್ನ ಆರೋಗ್ಯ ಸೇವೆಗಳನ್ನು ವಿಸ್ತರಿಸಿತು. ತನ್ನ ಚಾರಿಟಬಲ್ ಆಸ್ಪತ್ರೆಯ ಮೂಲಕ ಕೊಡಗು ಜನರಿಗೆ ೮೨ ವರ್ಷಗಳಿಂದ ನಿರಂತರ ವೈದ್ಯಕೀಯ ಸೇವೆಗಳನ್ನು ನೀಡುತ್ತಿರುವ ಆಶ್ರಮವು ಜಿಲ್ಲೆಯಲ್ಲಿ ಉಚಿತ ವೈದ್ಯಕೀಯ ಶಿಬಿರಗಳನ್ನು ಅನೇಕ ಬಾರಿ ನಡೆಸಿದೆ.

ವಿವೇಕಾನಂದ ಆರೋಗ್ಯ ಧಾಮದಲ್ಲಿ ಚಿಕಿತ್ಸೆಯ ಪ್ರಾಥಮಿಕ ವಿಧಾನ ಔಷಧ-ರಹಿತವಾಗಿದ್ದು, ದೇಹದ ಸ್ವಾಭಾವಿಕ ಸ್ವಯಂ-ಗುಣಪಡಿಸುವ ಸಾಮರ್ಥ್ಯವನ್ನು ವೃದ್ಧಿಸುವುದರ ಮೇಲೆ ಕೇಂದ್ರೀ





ಶ್ರೀ ಶಾರದಾ ನೇತ್ರಾಲಯ, ಬೆಳಗಾವಿ ಮಿಷನ್ ಆಶ್ರಮ

ಕರಿಸಲಾಗುತ್ತದೆ. ದೇಹದ ಸ್ವಾಭಾವಿಕ ಪ್ರತಿರಕ್ಷಣಾ ಸಾಮರ್ಥ್ಯಗಳನ್ನು ಉತ್ತೇಜಿಸುವ ಮೂಲಕ, ಪ್ರಕೃತಿ ಚಿಕಿತ್ಸೆಯು ದೇಹ–ಮನಸ್ಸನ್ನು ಪುನಶ್ಚೇತನಗೊಳಿಸಿ ಸಮತೋಲನವನ್ನು ಮರಳಿ ತರಲು ಸಹಾಯ ಮಾಡುತ್ತದೆ. ಆಧುನಿಕ ಸಮಾಜದ ಸ್ವಾಸ್ಥ್ಯ ಸಂಬಂಧಿತ ಸಮಸ್ಯೆಗಳಾದ ಬೊಜ್ಜು, ಅಧಿಕ ರಕ್ತದೊತ್ತಡ, ಸಂಧಿವಾತ, ಬೆನ್ನು ನೋವು, ಕೀಲು ನೋವು, ಜೀರ್ಣಶಕ್ತಿಯ ಸಮಸ್ಯೆ, ಥೈರಾಯ್ಡ್ ಸಮಸ್ಯೆಗಳು, ಮೈಗ್ರೇನ್, ಒತ್ತಡ ಮತ್ತು ಆತಂಕ ಇತ್ಯಾದಿಗಳನ್ನು ಹೈಡ್ರೋ ಥೆರಪಿ, ಮಡ್ ಥೆರಪಿ, ಫಿಸಿಯೋ ಥೆರಪಿ, ಮಸಾಜ್ ಥೆರಪಿ, ಕಲರ್ ಥೆರಪಿ, ಆಕ್ಯುಪಂಕ್ಚರ್ ಹಾಗು ಯೋಗಾಸನ ಮತ್ತು ಧ್ಯಾನ ಚಿಕಿತ್ಸೆಗಳ ಮೂಲಕ ನಿವಾರಿಸಲು ಇಲ್ಲಿ ಯೋಜಿಸಲಾಗಿದೆ.

**ಶಿವನಹಳ್ಳಿಯ ಶ್ರೀಶಾರದಾದೇವಿ ಚಿಕಿತ್ಸಾ ಕೇಂದ್ರ**ವು ೩೫ ವರ್ಷಗಳಿಂದ ನಿರಂತರವಾಗಿ ಭಾನುವಾರದಂದು ಕಾರ್ಯನಿರ್ವಹಿಸುತ್ತಿದೆ. ಪ್ರತಿ ಭಾನುವಾರ ೨೫೦ಕ್ಕೂ ಹೆಚ್ಚು ರೋಗಿಗಳು ದೂರದ ಗ್ರಾಮಗಳಿಂದ ಬಂದು ಚಿಕಿತ್ಸೆ ಪಡೆಯುತ್ತಾರೆ. ತಪಾಸಣೆಯ ಕಾರ್ಯಕ್ರಮವನ್ನು ಹೀಗೆ ಆಯೋಜಿಸಲಾಗಿದೆ: ಪ್ರತಿ ತಿಂಗಳ ೧ನೇ ಭಾನುವಾರ ಚರ್ಮದ ಆರೈಕೆ, ೨ನೇ ಭಾನುವಾರ ಮಧುಮೇಹ ಮತ್ತು ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳು, ೩ನೇ ಭಾನುವಾರ – ಕಣ್ಣು, ENT ಮತ್ತು ಸ್ತ್ರೀರೋಗ ಹಾಗೂ ೪ನೇ ಭಾನುವಾರ  ದಂತ ಮತ್ತು ಮಕ್ಕಳ ಆರೈಕೆ.

**ಹಲಸೂರು ರಾಮಕೃಷ್ಣ ಮಠವು** ಚಾರಿಟೇಬಲ್ ಡಿಸ್ಪೆನ್ಸರಿ ಮೂಲಕ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದೆ ಮತ್ತು ಬಡ ಜನತೆಗಾಗಿ ಉಚಿತ ನೇತ್ರಚಿಕಿತ್ಸಾ ಶಿಬಿರಗಳನ್ನು ನಡೆಸುತ್ತದೆ. ವೈದ್ಯಕೀಯ ಸೇವಾಕಾರ್ಯಗಳಿಗಾಗಿ ನಾಲ್ಕು ಅಂತಸ್ತಿನ ಕಟ್ಟಡವು ನಿರ್ಮಾಣವಾಗಿದೆ.  ಇಲ್ಲಿ ವೈದ್ಯಕೀಯ ತಪಾಸಣೆ ಹಾಗೂ ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತದೆ.

ಈ ಚಿಕಿತ್ಸಾಲಯವು ಸಾಮಾನ್ಯ ಓಪಿಡಿ, ದಂತ ವಿಭಾಗ, ನೇತ್ರ ವಿಭಾಗ, ಇಎನ್‌ಟಿ ವಿಭಾಗ, ಆರ್ಥೋಪೆಡಿಕ್ ವಿಭಾಗ, ಫಿಸಿಯೋ ತೆರಪಿ, ಸ್ತ್ರೀರೋಗ ಮತ್ತು ಮಕ್ಕಳ ವಿಭಾಗ – ಈ ವೈದ್ಯಕೀಯ ವಿಭಾಗಗಳನ್ನು ಹೊಂದಿವೆ. ಅಷ್ಟೇ ಅಲ್ಲದೆ ರಕ್ತ ಪರೀಕ್ಷೆಗಳು ಮತ್ತು ಮೂತ್ರ ಪರೀಕ್ಷೆಗಳಿಗೆ ಪ್ರಯೋಗಾಲಯ, ಕ್ಷ–ಕಿರಣ ಮತ್ತು ಇಸಿಜಿ ಸ್ಕ್ಯಾನಿಂಗ್ ಸೌಲಭ್ಯಗಳನ್ನು ಹೊಂದಿದೆ.

ಮಠವು ಮಾರ್ಚ್ ೧೯೯೯ರಿಂದ ಉಚಿತ ನೇತ್ರ ಶಿಬಿರಗಳನ್ನು ನಡೆಸಿ ಅಗತ್ಯವಿರುವವರಿಗೆ ಜಾತಿ ಮತ್ತು ಧರ್ಮವನ್ನು ಲೆಕ್ಕಿಸದೆ ಗುಣಮಟ್ಟದ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ಒದಗಿಸುತ್ತಿದೆ. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯ ಅಗತ್ಯವಿರುವ ರೋಗಿಗಳನ್ನು ಗುರುತಿಸಲು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಸೂಕ್ತ ಸ್ಥಳದಲ್ಲಿ ನೇತ್ರ ಶಿಬಿರಗಳನ್ನು ನಡೆಸಲಾಗುತ್ತದೆ. ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ ಮತ್ತು IOL (ಇಂಟ್ರಾ ಆಕ್ಯುಲರ್ ಲೆನ್ಸ್) ಇಂಪ್ಲಾಂಟ್‌ನೊಂದಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಿ ಅಂದೇ ಸಂಜೆ ಅವರನ್ನು ಕಳುಹಿಸಿಕೊಡಲಾಗುತ್ತದೆ. ಶಸ್ತ್ರ ಚಿಕಿತ್ಸೆಯ ಅಗತ್ಯವಿಲ್ಲದ ಆದರೆ ಸಣ್ಣಪುಟ್ಟ ಸಮಸ್ಯೆಗಳಿರುವ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ. ಶಸ್ತ್ರ ಚಿಕಿತ್ಸೆಯ ದಿನದಂದು ರೋಗಿಗಳಿಗೆ ಸಾರಿಗೆ, ಆಹಾರ ಮತ್ತು ಔಷಧಿಗಳ ಆರಂಭಿಕ ಕೋರ್ಸ್‌ಅನ್ನು ನಿಶ್ಶುಲ್ಕ ಒದಗಿಸಲಾಗುತ್ತದೆ. ಶಿಬಿರದ ಸ್ಥಳದಲ್ಲಿ ಶಸ್ತ್ರ ಚಿಕಿತ್ಸೆಯ ನಂತರದ ಆರೈಕೆಯನ್ನು ಸಹ ಉಚಿತವಾಗಿ ನೀಡಲಾಗುತ್ತದೆ. ಈ ಸೇವೆಯ ಅಂದಾಜು ವಾರ್ಷಿಕ ವೆಚ್ಚ ₹೧೫ ಲಕ್ಷಗಳು. ೧೯೯೯ರಿಂದ ೬೫೯ ಶಿಬಿರಗಳ ಮೂಲಕ ೫೪,೩೧೧ ತಪಾಸಣೆಗೊಳಗಾದ ರೋಗಿಗಳಲ್ಲಿ ೨೦,೦೮೪ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗಳನ್ನು ಮಠವು ನಡೆಸಿದೆ.

**ಬೆಳಗಾವಿಯ ಶ್ರೀಶಾರದಾ ನೇತ್ರಾಲಯವು** ೨೦೦೮ರಲ್ಲಿ ಒಂದಂತಸ್ತಿನ ಕಟ್ಟಡದಲ್ಲಿ ಪ್ರಾರಂಭವಾಯಿತು. ಇದರ ವತಿಯಿಂದ ಉಚಿತ ಕಣ್ಣಿನ ಪೊರೆ ತಪಾಸಣೆ ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ಮಿಷನ್ ಆವರಣದಲ್ಲಿ ವಾರಕ್ಕೆ ಎರಡು ಬಾರಿ ನಡೆಸಲಾಗುತ್ತದೆ. ಈ ಶಿಬಿರಗಳು ಕಣ್ಣಿನ ಪೊರೆಯಿಂದ ಉಂಟಾಗುವ ಕುರುಡುತನವನ್ನು ತಡೆಗಟ್ಟಿ ರೋಗಿಗಳನ್ನು ಪರಾವಲಂಬನೆಯಿಂದ ತಪ್ಪಿಸುತ್ತದೆ. ಶಸ್ತ್ರ ಚಿಕಿತ್ಸಕರು ಮತ್ತು ವೈದ್ಯರು ರೋಗಿಗಳನ್ನು ಪರೀಕ್ಷಿಸಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯ ಅಗತ್ಯವಿರುವವರನ್ನು ಗುರುತಿಸುತ್ತಾರೆ. IOL ಇಂಪ್ಲಾಂಟ್‌ಗಳೊಂದಿಗೆ ಹೊಲಿಗೆರಹಿತ ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ಮಾಡಲಾಗುತ್ತದೆ. ಬೆಳಗಾವಿ ಮತ್ತು ಸಮೀಪದ ಜಿಲ್ಲೆಗಳ ಖ್ಯಾತ ನೇತ್ರ ತಜ್ಞರು ಈ ಉದಾತ್ತ ಕಾರ್ಯಕ್ಕೆ ತಮ್ಮ ಸೇವೆಯನ್ನು ನೀಡುತ್ತಿದ್ದಾರೆ.

ಚಿಕಿತ್ಸಾಲಯದ ಕಟ್ಟಡವು ವೈದ್ಯಕೀಯ ಸ್ಕ್ರೀನಿಂಗ್ ಕೊಠಡಿ, ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗಾಗಿ ಮೈನರ್ OT, ರೋಗಿಗಳಿಗಾಗಿ ಕಾಯುವ ಕೊಠಡಿ ಮತ್ತು ಶಸ್ತ್ರಚಿಕಿತ್ಸೆಯ ನಂತರದ ವಿಶ್ರಾಂತಿ ಕೊಠಡಿ ಇತ್ಯಾದಿಗಳನ್ನು ಒಳಗೊಂಡಿದೆ. ೨೦೨೩ರ ಅಂತ್ಯದ ವರೆಗೆ ಅದರ ೧೬ ವರ್ಷಗಳ ಅವಧಿದಲ್ಲಿ ನೇತ್ರಾಲಯವು ೨೩ ಸಾವಿರಕ್ಕೂ ಹೆಚ್ಚು ರೋಗಿಗಳನ್ನು ಪರೀಕ್ಷಿಸಿದೆ ಮತ್ತು ೭೦೦೦ಕ್ಕೂ ಹೆಚ್ಚು ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ಮಾಡಿದೆ.

### ಪರಿಹಾರ ಮತ್ತು ಪುನರ್ವಸತಿ (ಅನ್ನದಾನ)

**ಪೊನ್ನಂಪೇಟೆಯ ಶ್ರೀ ರಾಮಕೃಷ್ಣ ಶಾರದಾಶ್ರಮದ** ಸ್ವಾಮಿ ಶಾಂಭವಾನಂದರು ಕೊಡಗಿನಲ್ಲಿ ಹರಡಿದ್ದ ಭೀಕರ ಮಲೇರಿಯಾ ಕಾಯಿಲೆಯ ನಿರ್ಮೂಲನಾ ಕಾರ್ಯಕ್ರಮವನ್ನು ಕೈಗೊಂಡು ಕೊಡಗಿನ ಎಲ್ಲ ಭಾಗಗಳಲ್ಲಿಯೂ ಸಂಚರಿಸಿ ಚೊಳ್ಳೆ ಪಾಟ್ (ಸೊಳ್ಳೆ ಹಾಡು) ಎಂಬ ಕೊಡವ ಭಾಷೆಯ ಹಾಡನ್ನು ರಚಿಸಿ ಜನರನ್ನು ಎಚ್ಚರಿಸಿದರು. ಸಾಂಕ್ರಾಮಿಕ ಪರಿಹಾರ ಕಾರ್ಯಗಳ ಜೊತೆಗೆ ಆಶ್ರಮವು ೨೦೧೮ ಮತ್ತು ೨೦೧೯ರ ಕೊಡಗು ಪ್ರವಾಹದ ಸಂದರ್ಭದಲ್ಲಿ ಪರಿಹಾರ ಕಾರ್ಯವನ್ನು ಸಹ ನಡೆಸಿತು. ಮಾದಾಪುರ ಮತ್ತು ಪೊನ್ನಂಪೇಟೆಯ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಆರ್ಥಿಕ ಪುನರ್ವಸತಿ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಪ್ರಯತ್ನದ ಭಾಗವಾಗಿ ಮಾದಾಪುರ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಿವಿಧೋದ್ದೇಶ ಸಭಾಂಗಣ ನಿರ್ಮಿಸಲಾಗಿದೆ. ಸಭಾಂಗಣವು ಸೈಕ್ಲೋನ್ ಆಶ್ರಯವಾಗಿ ಕಾರ್ಯ ನಿರ್ವಹಿಸುತ್ತದೆ ಮತ್ತು ಸ್ಥಳೀಯ ಸಮುದಾಯವು ಅದನ್ನು ವಿವಿಧ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತದೆ.

**ಬೆಳಗಾವಿಯ ಆಶ್ರಮವು** 'ದ್ರವ್ಯಯಜ್ಞ' ಎಂಬ ವಿಶೇಷ ಕಾರ್ಯವನ್ನು ಹಮ್ಮಿಕೊಂಡಿದ್ದು, ಈ ಮೂಲಕ ಪ್ರತಿ ತಿಂಗಳು ೫೦ ಬಡ ಕುಟುಂಬಗಳಿಗೆ ದವಸ ಧಾನ್ಯಗಳನ್ನು ಉಚಿತವಾಗಿ ವಿತರಿಸುತ್ತಿದೆ. ಬೆಳಗಾವಿಯ ಮತ್ತು ಮೈಸೂರಿನ ರಾಮಕೃಷ್ಣ ಆಶ್ರಮಗಳು ಪರಸ್ಪರ ಸಹಕಾರದೊಂದಿಗೆ ಕೊಪ್ಪಳ ಜಿಲ್ಲೆಯ ಅತಿವೃಷ್ಟಿ ಪೀಡಿತ ಪ್ರದೇಶಗಳಲ್ಲಿ ಪ್ರವಾಹ ಪರಿಹಾರ ಕಾರ್ಯಗಳನ್ನು ನೆರವೇರಿಸಿದವು. ೩೬೦೦ಕ್ಕೂ ಹೆಚ್ಚು ಕುಟುಂಬಗಳಿಗೆ ಬೇಯಿಸಿದ ಆಹಾರ, ಬಟ್ಟೆ, ಹೊದಿಕೆಗಳು, ಪಾತ್ರೆಗಳು, ಆಹಾರ ಸಾಮಗ್ರಿಗಳು, ಪ್ಲಾಸ್ಟಿಕ್ ಟಾರ್ಪಾಲಿನ್‌ಗಳು ಇತ್ಯಾದಿಗಳನ್ನು ಒದಗಿಸುವ ರೂಪದಲ್ಲಿ ₹೨೦ ಲಕ್ಷಕ್ಕೂ ಹೆಚ್ಚು ಮೌಲ್ಯದ ಪರಿಹಾರ ಸಾಮಗ್ರಿಗಳನ್ನು ಒದಗಿಸಲಾಗಿದೆ. ೨೦೦ಕ್ಕೂ ಹೆಚ್ಚು ಮನೆಗಳ ಪುನರ್ವಸತಿ ಹಾಗೂ ನಿರ್ಮಾಣ ಕಾಮಗಾರಿಯನ್ನೂ ಕೈಗೆತ್ತಿಕೊಳ್ಳಲಾಗಿದೆ.

೨೦೧೮ರಲ್ಲಿ **ದಾವಣಗೆರೆ** ಆಶ್ರಮವನ್ನು **ರಾಮಕೃಷ್ಣ ಮಿಷನ್** ವಹಿಸಿಕೊಂಡಿತು. ಸಂಸ್ಥೆ ಆರಂಭವಾದಾಗಿನಿಂದಲೂ ಇದು ಉಚಿತವಾಗಿ ಪಡಿತರ ಕಿಟ್‌ಗಳು, ಲೇಖನ ಸಾಮಗ್ರಿಗಳ ವಿತರಣೆ ಮತ್ತು ವಿದ್ಯಾರ್ಥಿವೇತನಗಳನ್ನು ಒದಗಿಸುವುದು ಮುಂತಾದ ಸಮಾಜ ಕಲ್ಯಾಣ ಚಟುವಟಿಕೆಗಳನ್ನೂ, ದಿವ್ಯತ್ರಯರ ಜೀವನ ಮತ್ತು ಸಂದೇಶಗಳನ್ನು ಕುರಿತ ಸ್ಪರ್ಧೆಗಳನ್ನು ಮತ್ತು ಯುವ ಸಮಾವೇಶಗಳನ್ನು ನಡೆಸುತ್ತಾ ಬಂದಿದೆ.

ಕೋವಿಡ್-೧೯ ಸಾಂಕ್ರಾಮಿಕ ಮತ್ತು ನಂತರದ ಲಾಕ್ ಡೌನ್ ಸಮಯದಲ್ಲಿ, ಕರ್ನಾಟಕದ ಎಲ್ಲಾ ಶಾಖೆಗಳು ಅಗತ್ಯವಿರುವ ಕುಟುಂಬಗಳಿಗೆ ಪಡಿತರ ಕಿಟ್ಟುಗಳು ಮತ್ತು ಬೇಯಿಸಿದ ಆಹಾರವನ್ನು ವಿತರಿಸಿತು. ಪರಿಹಾರ ವಿತರಣೆ ಸಾಮಗ್ರಿಯಲ್ಲಿ ಅಕ್ಕಿ, ಬೇಳೆ, ಅಡುಗೆ ಎಣ್ಣೆ, ತರಕಾರಿ, ಉಪ್ಪು, ಸಕ್ಕರೆ, ಹಿಟ್ಟು, ಮತ್ತು ಸಾಬೂನು,



ಕೋವಿಡ್ ಪರಿಹಾರ, ಮೈಸೂರು

ಡಿಟರ್ಜೆಂಟ್, ಫೇಸ್ ಮಾಸ್ಕ್, ಸ್ಯಾನಿಟೈಜರ್‌ಗಳು, ಟೂತ್‌ಪೇಸ್ಟ್ ಮತ್ತು ಟೂತ್ ಬ್ರಷ್‌ಗಳು ಸೇರಿವೆ. ಈ ನಿಬಂಧನೆಗಳನ್ನು ಕರ್ನಾಟಕದಾದ್ಯಂತ ಸುಮಾರು ೨ ಲಕ್ಷ ಕುಟುಂಬಗಳಿಗೆ ವಿತರಿಸಲಾಗಿದೆ.

### ಗ್ರಾಮೀಣಾಭಿವೃದ್ಧಿ

ರಾಮಕೃಷ್ಣ ಮಿಷನ್ ಬೆಂಗಳೂರಿನಿಂದ ಸುಮಾರು ೩೦ ಕಿ.ಮೀ.ದೂರದಲ್ಲಿರುವ ಆನೇಕಲ್ ತಾಲೂಕಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಗುಡ್ಡಗಾಡು ಪ್ರದೇಶಗಳಿಗೆ ಹೊಂದಿಕೊಂಡಂತೆ **ಶಿವನಹಳ್ಳಿ** ಎಂಬ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು, ಸುತ್ತಲಿನ ೧೬ ನಿರ್ಲಕ್ಷಿತ ಕುಗ್ರಾಮಗಳಲ್ಲಿರುವ ಸಾವಿರಾರು ಗ್ರಾಮಸ್ಥರಿಗೆ ಮಹಿಳಾ ಸಬಲೀಕರಣ, ಜೀವನೋಪಾಯ ವರ್ಧನೆ, ಸ್ವಸಹಾಯ ಗುಂಪುಗಳು, ಮತ್ತು ಪರಿಸರ ಪೋಷಣೆಯನ್ನು ಸುಮಾರು ಮೂವತ್ತು ವರ್ಷಗಳಿಂದ ಒದಗಿಸುತ್ತಾ ಬಂದಿದೆ. ಪಶ್ಚಿಮ ಘಟ್ಟಗಳ ಮತ್ತಿತರ ಅರಣ್ಯ ಪ್ರದೇಶದ ವಿವಿಧ ಅರಣ್ಯ ಜಾತಿಯ ಸಸ್ಯಗಳನ್ನು ನೆಡುವ ಮೂಲಕ ಪರಿಸರವನ್ನು ಶ್ರೀಮಂತಗೊಳಿಸುವ ಬೃಹತ್ ಕಾರ್ಯವನ್ನು ಪ್ರಾರಂಭಿಸಿದೆ. ಈಗಾಗಲೇ ೧೫೦ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಶುದ್ಧ ಅರಣ್ಯವನ್ನಾಗಿ ಪರಿವರ್ತಿಸಲಾಗಿದೆ. ಶಿವನಹಳ್ಳಿ ಸುತ್ತಲಿರುವ ೭ ಕುಗ್ರಾಮಗಳಲ್ಲಿ ಒಟ್ಟು ೨೨ ಸ್ವಸಹಾಯ




ರಾಮಕೃಷ್ಣ ಮಿಷನ್, ಶಿವನಹಳ್ಳಿ

ಗುಂಪುಗಳನ್ನು ಆಯೋಜಿಸಿದ್ದು, ಸುಮಾರು ೪೦೦ ಸದಸ್ಯರನ್ನು ಹೊಂದಿದೆ. ವಿಜಯಾ ಬ್ಯಾಂಕ್‌ನ ಮೂಲಕ ಹಲವು ಗುಂಪುಗಳಿಗೆ ತಲಾ ₹೪–೫ ಲಕ್ಷ ಸಾಲ ನೀಡಿದೆ.

೧೯೩೪ನೇ ಇಸವಿಯಲ್ಲಿಯೇ **ಮೈಸೂರಿನ ಆಶ್ರಮವು** ಪಡುವಾರಹಳ್ಳಿ ಎಂಬ ಗ್ರಾಮದಲ್ಲಿ ಶಿಕ್ಷಣ, ನೈರ್ಮಲ್ಯ, ಆರೋಗ್ಯ ಮತ್ತು ಆರ್ಥಿಕಾಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿತ್ತು ಎನ್ನುವುದು ಗಮನಿಸಬೇಕಾದ ವಿಷಯವಾಗಿದೆ. ಹಾಗೆಯೇ ಕುಂಬಾರಕೊಪ್ಪಲು ಎಂಬ ಗ್ರಾಮದಲ್ಲಿ ರಾತ್ರಿ ಶಾಲೆ, ಶಿಶುಕಲ್ಯಾಣ ಕೇಂದ್ರ, ಸಹಕಾರೀ ಬ್ಯಾಂಕುಗಳನ್ನು ಆಶ್ರಮದ ವತಿಯಿಂದ ಆಯೋಜಿಸಲಾಗಿತ್ತು. ೧೯೩೦ರಿಂದ ೧೯೭೭ರವರೆಗೆ ಚಾಮರಾಜನಗರ ಜಿಲ್ಲೆಯ ಹಲವು ಆದಿವಾಸಿ ಹಳ್ಳಿಗಳಲ್ಲಿ ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳನ್ನು ಆಶ್ರಮವು ನಡೆಸಿತು. ಹಾಗೆಯೇ ಬಿಳಿಗಿರಿರಂಗನ ಬೆಟ್ಟದ ತಪ್ಪಲಿನಲ್ಲಿರುವ ಬೂದಿಪಡಗ ಎಂಬ ಹಿಂದುಳಿದ ಕುಗ್ರಾಮವೊಂದರಲ್ಲಿ ವ್ಯವಸಾಯ, ರೇಷ್ಮೆ ಸಾಕಣೆ, ತೋಟಗಾರಿಕೆ ಮುಂತಾದ ಹಲವು ಗ್ರಾಮೋದ್ಯೋಗಗಳಲ್ಲಿ ಅಲ್ಲಿನ ಜನರಿಗೆ ಆಧುನಿಕ ವೈಜ್ಞಾನಿಕ ಪದ್ಧತಿಯನ್ನು ಉಪಯೋಗಿಸುವ ಬಗೆಯನ್ನು ತಿಳಿಸಿಕೊಡುವ ಕಾರ್ಯಕ್ರಮವನ್ನೂ ನಡೆಸಿತು. ಮೈಸೂರು ಗ್ರಾಮಾಂತರ ಪ್ರದೇಶದಲ್ಲಿ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವನಿರ್ಮಾಣದ ವಿಚಾರಗಳನ್ನು ಜ್ಞಾನವಾಹಿನಿ ಎಂಬ ಅಭಿಯಾನ ಕಾರ್ಯಕ್ರಮವನ್ನೂ ಆಶ್ರಮವು ಹಮ್ಮಿಕೊಂಡಿತ್ತು.

ಸ್ವಾಮಿ ಶಾಂಭವಾನಂದಜಿ **ಪೊನ್ನಂಪೇಟೆ ಆಶ್ರಮದಲ್ಲಿ** ಆಧುನಿಕ ಜೇನು ಕೃಷಿಯ ಪ್ರಾಯೋಗಿಕ ಕೇಂದ್ರವನ್ನು ಆರಂಭಿಸಿದರು. ಜೇನುಸಾಕಣೆ ಮತ್ತು ಜೇನು ಉತ್ಪಾದನೆಯನ್ನು ಮತ್ತಷ್ಟು ಬೆಂಬಲಿಸಲು, ೧೯೩೭ರಲ್ಲಿ ಕೂರ್ಗ್ ಜೇನು ಮತ್ತು ಮೇಣ ಉತ್ಪಾದಕರ ಸಹಕಾರ ಸಂಘವನ್ನು ಸಾರ್ವಜನಿಕ ಬೆಂಬಲದೊಂದಿಗೆ ಸ್ಥಾಪಿಸಿದರು. ಈ ಕಾರ್ಯಕ್ರಮವು ಜೇನುಸಾಕಣೆಯನ್ನು ಸುಸ್ಥಿರ ಮತ್ತು ಆದಾಯ–ಉತ್ಪಾದಿಸುವ ಚಟುವಟಿಕೆಯಾಗಿ ಉತ್ತೇಜಿಸುವ ಮೂಲಕ ಹಳ್ಳಿಯ ಜನಸಾಮಾನ್ಯರ ಆರ್ಥಿಕ ಅಭಿವೃದ್ಧಿಯ ಕಡೆಗೆ ಗಮನ ಹರಿಸುತ್ತದೆ. ಜೇನುಗೂಡನ್ನು ನಾಶಪಡಿಸದೆ ಜೇನು ತೆಗೆಯಲು ಈ ಸಂಘವು ವಿನ್ಯಾಸಗೊಳಿಸಿದ ನವೀನ ಜೇನು ತೆಗೆಯುವ ಯಂತ್ರವು ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪ್ರಶಸ್ತಿ ಪಡೆಯಿತು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸ್ವಚ್ಛ ಭಾರತ ಕರೆಗೆ ಓಗೊಟ್ಟು **ಮಂಗಳೂರಿನ ರಾಮಕೃಷ್ಣ ಮಠ** ಸ್ವಚ್ಛ ಮಂಗಳೂರು ಅಭಿಯಾನವನ್ನು ೨೦೧೪–೧೯ ಐದು ವರ್ಷಗಳ ಕಾಲ ಕೈಗೊಂಡು ಪ್ರತಿ ಭಾನುವಾರ ಸ್ವಚ್ಛತಾ ಶ್ರಮದಾನ ಹಮ್ಮಿಕೊಂಡಿತ್ತು. ಒಟ್ಟಾರೆ ೧೦,೦೦೦ ಸ್ವಯಂಸೇವಕರು ಮತ್ತು ೧೩,೦೦೦ ವಿದ್ಯಾರ್ಥಿಗಳು ಸ್ವಚ್ಛತಾ ಸೇನಾನಿಗಳಾಗಿ ಭಾಗಿಯಾಗಿದ್ದರು. ೪೦,೦೦೦ ಮನೆಗಳನ್ನು ಖುದ್ದಾಗಿ ಭೇಟಿ ನೀಡಿ ೪೦೦ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ೨೦೦ ಗ್ರಾಮಗಳಲ್ಲಿ ೨,೦೦೦ ಶ್ರಮದಾನಗಳನ್ನು ಹಮ್ಮಿಕೊಳ್ಳಲಾಯಿತು. ೫,೦೦೦ ಮನೆಗಳಲ್ಲಿ ಹಸಿಕಸ ನಿರ್ವಹಿಸಲು ಮೂರು ಮಡಕೆ ಸಾಧನವನ್ನು ರಿಯಾಯತಿ ದರದಲ್ಲಿ ವಿತರಿಸಲಾಗಿದೆ. ಇದಲ್ಲದೇ ಅನೇಕ ಬಸ್ ತಂಗು ದಾಣಗಳ ನಿರ್ಮಾಣ, ಪಾರ್ಕ್‌ಗಳ ನಿರ್ಮಾಣ, ರಸ್ತೆ ಫುಟ್‌ಪಾತ್ ದುರಸ್ತಿ, ಸೈಕಲ್ ಜಾಥಾ, ಕಲಾ ಶಿಬಿರಗಳು, ಸೆಮಿನಾರ್‌ಗಳು ಈ ಅಭಿಯಾನದ ವಿಶೇಷಗಳಾಗಿದ್ದವು. ಈ ಸ್ವಚ್ಛತಾ ಅಭಿಯಾನ ಕರಾವಳಿ ಭಾಗದಲ್ಲಿ ವಿಶೇಷವಾಗಿ ಜನರಲ್ಲಿ ಸ್ವಚ್ಛತೆಯ ಜಾಗೃತಿ ಮತ್ತು ಜವಾಬ್ದಾರಿಯನ್ನು ಉಂಟುಮಾಡುವಲ್ಲಿ ಸಫಲವಾಗಿದೆ.

ಸ್ವಾಮಿ ಪ್ರಬುದ್ಧಾನಂದರು ಮೇಲ್ವಿಚಾರಕರಾಗಿದ್ದಾಗ ಬೆಂಗಳೂರಿನ ರಾಮಕೃಷ್ಣ ವಿದ್ಯಾರ್ಥಿಮಂದಿರದಲ್ಲಿ ವ್ಯಾಸಂಗ ಮಾಡಿದ ಡಾ. ಯಲ್ಲಪ್ಪ ಪಾವಗಡ ತಾಲ್ಲೂಕಿನ ನೇರಲಕುಂಟೆ ಗ್ರಾಮದ **ವೆಂಕಟಾಪುರ**ದಲ್ಲಿ ಪ್ರಾರ್ಥನಾ ಮಂದಿರ, ವೈದ್ಯಕೀಯ ಔಷಧಾಲಯ ಮತ್ತು ಸಾಧು ನಿವಾಸಕ್ಕೆ ಕೊಠಡಿಗಳನ್ನು ನಿರ್ಮಿಸಿದರು. ಈ ಗ್ರಾಮೀಣ ಘಟಕವು ಮೇ ೨೦೨೩ರಿಂದ ರಾಮಕೃಷ್ಣ ಮಹಾಸಂಘದ ಶಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತಿ ತಿಂಗಳ ಮೂರನೇ ಭಾನುವಾರ ವೈದ್ಯಕೀಯ ಶಿಬಿರ, ಆಧ್ಯಾತ್ಮಿಕ ಸತ್ಸಂಗ, ಹತ್ತಿರದ ಶಾಲೆಯ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ


'ಸ್ವಚ್ಛ ಮಂಗಳೂರು' ಅಭಿಯಾನ



ಸಂದೇಶದ ಪ್ರಚಾರ, ಹತ್ತಿರದ ಹಳ್ಳಿಯ ಮಹಿಳೆಯರಿಗೆ ಆಹಾರ ಮತ್ತು ಬಟ್ಟೆಗಳನ್ನು ಒದಗಿಸುವುದು, ರೈತರಿಗೆ ಐಎಚ್ಆರ್ ನಿಂದ ಕಾರ್ಯಾಗಾರಗಳನ್ನು ಆಶ್ರಮ ಆಯೋಜಿಸುತ್ತದೆ.

### ಉಪಸಂಹಾರ

೧೮೮೪ರಲ್ಲಿ ಗೌಡೀಯ ವೈಷ್ಣವ ಧರ್ಮದ ಪ್ರಮುಖ ಸಿದ್ಧಾಂತಗಳಲ್ಲಿ ಒಂದಾದ 'ಜೀವೇ ದಯಾ' (ಜೀವಿಗಳಿಗೆ ದಯೆ ತೋರಿಸಬೇಕು) ಎಂಬ ವಾಕ್ಯವನ್ನು ವಿವರಿಸಲು ಹೊರಟ ಶ್ರೀ ರಾಮಕೃಷ್ಣರು ಸಮಾಧಿಮಗ್ನರಾಗಿ ಆಧ್ಯಾತ್ಮಿಕರಾಜ್ಯವನ್ನು ಪ್ರವೇಶಿಸುತ್ತಾರೆ. ಅವರ ಮನಸ್ಸು ಪ್ರಕೃತಿಸ್ಥವಾದಾಗ ಅವರು ಹೇಳುತ್ತಾರೆ, ''...ಏನು! ಎಲ್ಲಾ ಜೀವಿಗಳಿಗೆ ದಯೆಯೇ? ದಯೆಯ ಬಗ್ಗೆ ಮಾತನಾಡುವುದು ಎಷ್ಟು ಮೂರ್ಖತನ! ಮಾನವರು ಭೂಮಿಯ ಮೇಲೆ ಹರಿದಾಡುವ ಹುಳುಗಳಂತೆ ಅತ್ಯಲ್ಪರು – ಅವರು ಇತರರಿಗೆ ಕರುಣೆ ತೋರಿಸುವುದು! ಅದು ಅಸಂಬದ್ಧ. ಅದು ದಯೆಯಲ್ಲ, ಸೇವೆ. ಎಲ್ಲರನ್ನೂ ಪರಮಾತ್ಮನ ಅಭಿವ್ಯಕ್ತಿಗಳೆಂದು ಗುರುತಿಸಿ ಸೇವೆ ಮಾಡಬೇಕು (ಶಿವಜ್ಞಾನೇ ಜೀವ ಸೇವಾ).''

ಈ ಪರಿಕಲ್ಪನೆಯನ್ನೇ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಹಾಸಂಘದ ಸೇವಾದರ್ಶದ ಹಿನ್ನೆಲೆಯಾಗಿ ಎತ್ತಿಹಿಡಿದಿದ್ದಾರೆ. ೧೮೯೭ರ ಜುಲೈ ೩ರಂದು ತಮ್ಮ ಶಿಷ್ಯರಾದ ಶರತ್‌ಚಂದ್ರ ಚಕ್ರವರ್ತಿಗೆ ಬರೆದ ಪತ್ರದಲ್ಲಿ ಸ್ವಾಮೀಜಿ ಹೀಗೆ ಬರೆದಿದ್ದಾರೆ, ''...ಇಲ್ಲೊಂದು ವಿಶೇಷತೆ ಇದೆ: ನೀವು ಜೀವನನ್ನು ಜೀವ ಎಂದು ಭಾವಿಸಿದಾಗ, ಅದು ದಯೆಯಾಗುವುದು; ಆದರೆ ಅವನು ಆತ್ಮ ಎಂಬ ಜ್ಞಾನದಿಂದ ನೀವು ಅವನ ಸೇವೆ ಮಾಡುವಾಗ, ಅದು ಪ್ರೇಮವಾಗುವುದು. ಆತ್ಮವು ಪ್ರೀತಿಸಲು ಯೋಗ್ಯವಾದ ಏಕೈಕ ವಸ್ತುವಾಗಿದೆ ಎಂದು ಶ್ರುತಿ, ಸ್ಮೃತಿ ಮತ್ತು ಅನುಭೂತಿಯಿಂದ ತಿಳಿದು ಬರುತ್ತದೆ... ಆದ್ದರಿಂದ, ನಮ್ಮದು ಸೇವೆಯಾಗಬೇಕು ದಯೆಯಲ್ಲ... ನಮಗೆ ಬೇಕಾಗಿರುವುದು ಕರುಣೆಯಲ್ಲ, ಆದರೆ ಪ್ರೇಮ, ಅಂದರೆ ಎಲ್ಲದರಲ್ಲೂ ಇರುವ ಚೈತನ್ಯವನ್ನು ಅರಿವಿಗೆ ತಂದುಕೊಳ್ಳುವುದು.''

'ಸೇವೆಯೇ ಆರಾಧನೆ' ಎಂಬ ಈ ಪರಿಕಲ್ಪನೆಯು ರಾಮಕೃಷ್ಣ ಮಹಾಸಂಘದ ಎಲ್ಲಾ ಸಾಮಾಜಿಕ ಸೇವಾಕಾರ್ಯಗಳಲ್ಲಿ ಪ್ರತಿಬಿಂಬಿತವಾಗಿ ಅನುಷ್ಠಾನದಲ್ಲಿರುವುದನ್ನು ಕಾಣಬಹುದು. ಈ ಪರಿಕಲ್ಪನೆಯು ಮಾನವನ ದೈವತ್ವವನ್ನು ಸಾರುವ ವೇದಾಂತದ ಗಹನವಾದ ಆದರ್ಶವನ್ನು, ಸೇವೆಯ ಮೂಲಕ ಸರ್ವವ್ಯಾಪಿಯಾದ ಪರಬ್ರಹ್ಮದೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಪ್ರಾಯೋಗಿಕತೆಯೊಂದಿಗೆ ಸಾಮರಸ್ಯದಿಂದ ಸಂಯೋಜಿಸುತ್ತದೆ. ಇದು ರಾಮಕೃಷ್ಣ ಆದೇಶದ ಧ್ಯೇಯವಾಕ್ಯದಲ್ಲಿ ಅಡಕವಾಗಿದೆ – **'ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯ ಚ'** ಅಂದರೆ ತನ್ನ ಮೋಕ್ಷಕ್ಕೋಸ್ಕರ ಮತ್ತು ಜಗತ್ತಿನ ಹಿತಕ್ಕಾಗಿ.'

ಈ ಸೇವಾಚಟುವಟಿಕೆಗಳ ಮೂಲಕ, ಬಡವರು ಮತ್ತು ಸಂತ್ರಸ್ತರಲ್ಲಿ ದೇವರನ್ನು ಕಾಣುವ ಮೂಲಕ, ಅವರ ದುಃಖವನ್ನು ನಿವಾರಿಸಲು ಮತ್ತು ಅವರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ರಾಮಕೃಷ್ಣ ಮಹಾಸಂಘವು ಶ್ರಮಿಸುತ್ತಿದೆ. ರಾಮಕೃಷ್ಣ ಮಠ ಮತ್ತು ಮಿಷನ್ ಜಾಗತಿಕ ಚಿಂತನೆಯ ಮೇಲೆ ಬೀರಿರುವ ಅಗಾಧವಾದ ಪ್ರಭಾವ ಅವುಗಳ ಸಂಖ್ಯಾಬಲವನ್ನು ಮೀರಿಸಿರುವ ಬೃಹತ್ ಪ್ರಮಾಣದ್ದಾಗಿದೆ. ✽

## ಭಾರತೀಯ ಸಂಸ್ಕೃತಿಯ ಅಂತಸ್ಸಾರ

ಸಂಸ್ಕೃತಿ ಒಂದು ಪುರಾತನವಾದ ಆಲದ ಮರದಂತೆ. ಆ ಮರದ ಪಾದ ಒಂದೆರಡು ಗಜದಷ್ಟು ಅಗಲದ ನೆಲದಲ್ಲಿ ನಿಂತು ಆ ಒಂದೇ ಸಣ್ಣ ಕಡೆ ಸ್ಥಿರವಾಗಿರುತ್ತದೆ. ಅದರ ತಲೆಯ ಕಡೆಯಾದರೋ, ಶಾಖೋಪಶಾಖೆಗಳು ನೂರಾರು ಅಂತರಿಕ್ಷದ ಎಂಟು ದಿಕ್ಕುಗಳಲ್ಲಿಯೂ ವಿಸ್ತಾರವಾಗಿ ಚಾಚಿಕೊಂಡು, ನೂರಾರು ಪ್ರದೇಶಗಳ ಗಾಳಿಗಳಿಂದ ಸಾರವನ್ನು ಹೀರಿಕೊಳ್ಳುತ್ತ, ಸಾವಿರಾರು ತೆರದ ಪಕ್ಷಿಗಳಿಗೆ ಆಸರೆಯಾಗಿರುತ್ತದೆ. ಮೂಲದಲ್ಲಿ ಅದು ನಿಯತ, ಶಿರೋಭಾಗದಲ್ಲಿ ಯಥೇಷ್ಟ. ಸಂಸ್ಕೃತಿಯೂ ಅದರಂತಯೇ. ಮೂಲದಲ್ಲಿ ಅದು ಏಕವರ್ಗದ್ದು. ಏಕ ಸಮಾಜದ್ದು. ಏಕ ದೇಶದ್ದು. ಆದರೆ ಫಲ ಪರಿಣಾಮದಲ್ಲಿ ಅದು ಬಹುವರ್ಗ ಸಂಸರ್ಗದ್ದು, ನಾನಾ ಸಮಾಜ ಸಂಘಟಿತವಾದದ್ದು. ವಿಶ್ವವಿಸ್ತಾರವಾದದ್ದು. ಅದು ವ್ಯಷ್ಟಿಯನ್ನು ಸಮಷ್ಟಿಯೊಡನೆ ಕೂಡಿಸುತ್ತದೆ. ಅದರ ಒಂದು ಕೊನೆ ವ್ಯಕ್ತಿ, ಇನ್ನೊಂದು ಕೊನೆ ವಿಶ್ವಪ್ರಪಂಚ. ಮಿತದಿಂದ ಅದು ಅಪರಿಮಿತಕ್ಕೆ ಹಬ್ಬುತ್ತದೆ. ಸಂಸ್ಕೃತಿ ಹೀಗೆ ಏಕವ್ಯಕ್ತಿ ಮೂಲವಾಗಿ – ಏಕ ಸಮಾಜ ಏಕ ಜನಪದ ಮೂಲವಾಗಿ ಹುಟ್ಟಿಕೊಂಡು, ಬೆಳೆದು ಬೆಳೆದಂತೆಲ್ಲಾ ಸಮಸ್ತ ಲೋಕದ ಸಾರಗಳನ್ನೂ ತನ್ನೊಳಕ್ಕೆ ಅಂಗೀಕರಿಸಿಕೊಂಡು, ಸಮಸ್ತ ಲೋಕ ಜೀವನಕ್ಕೂ ತಾನು ಒಂದು ಪ್ರತ್ಯೇಕ ಸಂಪತ್ತಾಗುತ್ತದೆ. ಹೀಗೆ ವ್ಯಷ್ಟಿ ಸಮಷ್ಟಿ ಸಂಮಿಶ್ರಿತವಾದದ್ದು ಸಂಸ್ಕೃತಿ.

ಭಾರತೀಯ ಸಂಸ್ಕೃತಿಯ ಅಂತಸ್ಸಾರವೆಂಥಾದ್ದೆಂಬುದನ್ನು ಮೇಲೆ ಸಂಗ್ರಹವಾಗಿ ನೋಡಿದ್ದೇವೆ. ೧.ಆತ್ಮವಸ್ತುವಿನ ಪರಮೋತ್ಕೃಷ್ಟತೆ. ೨. ತದ್ದೃಷ್ಟಿಯಿಂದ ನಾನಾ ಪುರುಷಾರ್ಥಗಳಲ್ಲಿ ಒಂದು ತಾರತಮ್ಯ ವ್ಯವಸ್ಥೆ. ೩.ತದನುಗುಣವಾದ ಧರ್ಮವೆಂಬ ಜೀವನ ನಿಯಮಕ್ರಮ — ಈ ಮೂರು ಭಾರತೀಯ ಸಂಸ್ಕೃತಿಯ ಆಧಾರತತ್ತ್ವಗಳು.

— **ಡಿ.ವಿ.ಜಿ.** *('ಸಂಸ್ಕೃತಿ', ೨೦೧೮, ಸಾಹಿತ್ಯ ಪ್ರಕಾಶನ, ಪು. ೭೯–೮೦)*